**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .447/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಚೌಡಯ್ಯ | **ಚಾ.ಸಾ.-5** |
| **ತಂದೆ/ಗಂಡನ ಹೆಸರು** | - | ಹಾಡಿನ ಚೌಡಯ್ಯ | **ಫ್ರಾ.ಸಾ.-8** |
| **ವಯಸ್ಸು** | - | 70 ವರ್ಷ | |
| **ಉದ್ಯೋಗ** | - | ಕೂಲಿ ಕೆಲಸ | |
| **ವಾಸಸ್ಥಳ** | - | ಕೆ ಹೊನ್ನಲಗೆರೆ | |

ದಿನಾಂಕಃ 07-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2 ಸಿ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಸುಮಾರು 10 ವರ್ಷಗಳ ಹಿಂದೆ ಪೋಲೀಸರ ಕೋರಿಕೆಯ ಮೇರೆಗೆ ನಮ್ಮ ಗ್ರಾಮದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 2 ರಲ್ಲಿ ಪೋಲೀಸರು ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ನಿ.ಪಿ. 2 ದಾಖಲೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿನಾಂಕಃ 02-05-2016 ರಂದು ಬೆಳಗ್ಗೆ 11-00 ರಿಂದ 11.50 ಗಂಟೆಯವರೆಗೆ ಚಾ,ಸಾ. 1 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ನನ್ನ ಮತ್ತು ಚಾ.ಸಾ. 6 ಮತ್ತು 7 ರವರ ಸಮಕ್ಷಮ ನಿ.ಪಿ. 2 ರಂತೆ ಮಹಜರ್ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ

ಇರುವ ಮು. ಮಾ. 1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿ.ಪಿ. 2 ರಲ್ಲಿರುವ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಏನು ಇಲ್ಲ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.